ಶ್ರೀ ಕೆ. ಯಂಕಟಪ್ಪ.—ಇನ್ನೂ ೨೫೦೦ ನಿವೇಶನಗಳನ್ನು ಹಂಚುವ ಕೆಲಸ ಭರದಿಂದ ಸಾಗುತ್ತಿದೆ ಯೆಂದು ಆಗಲೇ ಹೇಳಿದಿರಿ. ಅಂದಮೇಲೆ ತಮಗೆ ಎಲ್ಲಾ ವಿವರಗಳೂ ಸ್ಪಷ್ಟವಾಗಿ ಗೊತ್ತಿರಬೇಕಲ್ಲವೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಉತ್ತರ ಕೊಡುತ್ತೇನೆ.

Sites distributed among siteless, harijans and other weaker sections in Arkalgud Taluk.

781 SRI K. B. MALLAPPA (Arakalgud).—Will the Minister of State for Housing be pleased to state :—

(a) the number of house-sites distributed among the siteless and harijans and other weaker sections in Arkalgud Taluk ;

(b) whether houses and sheds have been constructed on these sites; if so how many ;

(c) whether it has come to the notice of the Government that a owner of the land in Mallapura Ramanathpur Hobli has obstructed to construct houses and sheds inthe sites allotted ;

(d) if so, the action proposed to be taken against him?

SRI. P. F. RODRIGUES (Minister of State for Housing).—

(a) 3,834.

(b) Yes. (i) Houses ... 585

(ii) Huts ... 193

778

(c) Yes.

(d) the obstructions have been removed and the boundary stones refixed. The sites are restored to the allottees.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಆರಕಲಗೂಡು ತಾಲ್ಲೂಕಿನಲ್ಲಿರುವ ನಿವೇಶನ ರಹಿತ ಹರಿಜನ ಹಾಗೂ ಇತರೆ ದುರ್ಬಲವರ್ಗದವರಿಗೆ ಹಂಚಲಾದ ಗೃಹಗಳ ನಿವೇಶನಗಳ ಸಂಖ್ಯೆ ಎಷ್ಟು ಎಂದು ಕೇಳಿರುವ ನನ್ನ ಪ್ರಶ್ನೆಗೆ ಉತ್ತರವಾಗಿ ೩೮೩೪ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ನಿವೇಶನ ಇಲ್ಲದಿರುವವರು ಎಷ್ಟುಮಂದಿಗೆ ಕೊಟ್ಟಿದ್ದೀರಿ ? ಮತ್ತು ದುರ್ಬಲವರ್ಗದವರಿಗೆ ಎಷ್ಟು ಮಂದಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಪಿ. ಎಫ್ ರೋಡ್ರಿಗ್ಸ್.—೩೮೩೪ ನಿವೇಶನಗಳ ಪೈಕಿ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೦೨೯, ಪೆಡ್ಯೂಲ್ಡ್ ಟ್ರೈಬ್ಸ್‌ಗೆ ೪೧ ಹಾಗೂ ದುರ್ಬಲ ವರ್ಗದವರಿಗೆ ೨೬೬೪ ನಿವೇಶನಗಳನ್ನು ಕೊಟ್ಟಿದ್ದೇವೆ,

ಶ್ರೀ ಕೆ. ಬಿ. ಮಲ್ಲಪ್ಪ.—ಕೆಲವು ಊರುಗಳಲ್ಲಿ ಜಮೀನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ, ಆದರೆ ಫಾರ್ಮೇಷನ್ ಮಾಡಿಲ್ಲ. ಕೆಲವು ಊರುಗಳಲ್ಲಿ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದುದು ಇದೆ. ಆದರಿಂದ ಈ ಊರುಗಳು ಯಾವುವು ಎಂದು ತಿಳಿಸುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಯಾವ ಯಾವ ಊರುಗಳು ಎಂದು ತಾವು ಕೇಳಿದರೆ, ಆ ವಿವರ ನನ್ನ ಬಳಿ ಇಲ್ಲ, ತಾವು ಇನ್ನೊಂದು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಹರಿಜನರಿಗೆ ಮತ್ತು ದುರ್ಬಲವರ್ಗದವರಿಗೆ ನಿವೇಶನಗಳನ್ನು ಹಂಚುವ ವ್ಯವಸ್ಥೆ ಮಾಡಿದ್ದೀರಾ ? ಅವರಿಗೆ ಪೊಸಿಷನ್ ಕೊಟ್ಟೀದ್ದೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಸೈಟುಗಳನ್ನು ಅವರ ಸ್ವಾಧೀನಕ್ಕೆ ಕೊಟ್ಟಿದ್ದೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ಕೆಲವರಿಗೆ ಸೈಟುಗಳನ್ನು ಕೊಟ್ಟಿದ್ದರೂ ಅದರ ಹಕ್ಕು ಪತ್ರವನ್ನು ಕೊಟ್ಟಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಅಂಥ ದೂರುಗಳು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಗುಡಿಸಲುಗಳನ್ನು ಕಟ್ಟಿಕೊಳ್ಳಲು ದುಡ್ಡು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ನಾನು ಈ ಗುಡಿಸಲುಗಳನ್ನು ಹೋಗಿ ನೋಡಿಕೊಂಡು ಬರೋಣವೆಂದು ಹೋಗಿದ್ದಾಗ, ತಾವು ಎಲ್ಲಿಯೂ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಹಣವನ್ನು ಕೊಟ್ಟೇ ಇಲ್ಲ. ಇದು ಬೋಗಸ್ ಫಿಗರ್ಸ್. ಅಲ್ಲವೆ ? ಯಾವ ಊರಿನಲ್ಲಿ ನೀವು ದುಡ್ಡು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ !

ಶ್ರೀ ಪಿ. ಎಫ್. ರೋಡ್ರಿಗ್ಸ್.—ಯಾವ ಊರಿಗೆ ದುಡ್ಡು ಕೊಟ್ಟಿದೆ ಎಂಬುದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, (ಈ) ಪ್ರಶ್ನೆಗೆ ಉತ್ತರಿಸುತ್ತಾ,

"ಅಡಚಣೆಗಳನ್ನು ತೊಡೆದು ಹಾಕಿ ಹಾಗೂ ಸರಹದ್ದು ಕಲ್ಲುಗಳನ್ನು ಪುನಃ ನೆಡಲಾಗಿದೆ. ನಿವೇಶನಗಳನ್ನು ಗೊತ್ತುಪಡಿಸಿದವರಿಗೆ ಪುನಃ ಸ್ವಾಧೀನಕ್ಕೆ ಕೊಡಲಾಗಿದೆ"

ಎಂದು ಹೇಳಿದ್ದೀರಿ. ಆದರೆ ಆ ಜಮೀನಿನ ಒಡೆಯರು ಈ ದುರ್ಬಲ ವರ್ಗದ ಜನರ ಮೇಲೆ ದಬ್ಬಾಳಿಕೆ ನಡೆಸಿ ಗುಡಿಸಲುಗಳನ್ನು ಕಟ್ಟಿಕೊಳ್ಳಲು ತಂದು ಇಟ್ಟುಕೊಂಡಿದ್ದ ಸಾಮಾನುಗಳನ್ನೆಲ್ಲಾ ನಾಶ ಮಾಡಿ ಗುಡಿಸಲುಗಳಿಗೆ ಬೆಂಕಿ ಇಟ್ಟು ಅವರನ್ನು ಅಲ್ಲಿಂದ ಓಡಿಸಿದ್ದಾರೆ. ಆದ್ದರಿಂದ ಆ ಜಮೀನ್ದಾರರ ಮೇಲೆ ಕ್ರಮ ತೆಗೆದುಕೊಂಡು ಈ ದುರ್ಬಲವರ್ಗದವರೆಂದು ತಾವು ಯಾರ್ಯಾರಿಗೆ ಸೈಟುಗಳನ್ನು ಕೊಟ್ಟಿದ್ದೀರಿ ಅವರಿಗೇ ಮತ್ತೆ ಸೈಟುಗಳನ್ನು ಕೊಡುತ್ತೀರಾ ಅಲ್ಲದೆ ತೊಂದರೆಗೊಳಗಾಗಿರುವ ಇವರಿಗೆ ಏನಾದರೂ ಪರಿಹಾರವನ್ನು ಕೊಡುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಮನೆಗಳನ್ನು ಸುಟ್ಟು ಹಾಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಸರ್ಕಾರದವರು ಈ ಜನಗಳಿಗೆ ನಿವೇಶನಗಳನ್ನು ಕೊಟ್ಟ ಮೇಲೆ, ಆ ಜಮೀನ್ದಾರರು ಅವರನ್ನು ಅಲ್ಲಿಂದ ಓಡಿಸಿ ಆ ಜಮೀನನ್ನು ಉತ್ತು, ಬಿತ್ತಿ ಬೆಳೆ ಬೆಳೆದಿದ್ದಾರೆ.

ಶ್ರೀ ಪಿ. ಎಫ್. ರೋಡ್ರಿಗ್ಸ್.— ಆ ಜನರಿಗೆ ಸೈಟುಗಳನ್ನು ಫಾರ್ಮೇಷನ್ ಮಾಡಿ, ಕಲ್ಲುಗಳನ್ನು ನೆಟ್ಟು ಮಾರ್ಕ್ ಮಾಡಿ ಕೊಟ್ಟಿದ್ದೇವೆ. ನಂತರ ಈ ಭೂ ಮಾಲೀಕರು ಇಟ್ಟಿದ್ದ ಬೆಳೆಯನ್ನು ತಹಸೀಲ್ದಾರ್‌ರವರು ಬಂದು ತಾ॥ ೪ನೇ ಆಗಸ್ಟ್ ೧೯೭೮ ಹಾಗೂ ೨೮ನೇ ಆಗಸ್ಟ್ ೧೯೭೮ರಂದು ಪರಾಜು ಹಾಕಿ ಬಂದ ದುಡ್ಡನ್ನು ಇವರಿಗೆ ಪರಿಹಾರವಾಗಿ ಕೊಟ್ಟಿದ್ದಾರೆ. In respect of this unauthorised one, a complaint has been lodged at the police station.

1-30 P.M.

Enquiry in regard to the affairs of the Bellary Municipal Council.

912 SRI M. RAMAPPA (Kurugodu).—Will the Minister for Municipal Administration be pleased to state :—

(a) whether an enquiry was conducted by the Divisional Commissioner, Gulbarga in regard to the affairs of the Bellary City Municipal Council in 1977-78 and if so what were its findings.